## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ), ಇವರು ನಿಯಮ 330ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ:

ವಿಷಯ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೇಕಾರರ ಸಮುದಾಯದ ಅಭಿವೃದ್ಧಿ ಯೋಜನೆಗಾಗಿ ಆದೇಶ ಸಂಖ್ಯೆ: **BCW 155 BMS 2011,** ದಿನಾಂಕ: 15.09.2012 ರಲ್ಲಿ ಸಮುದಾಯ ಭವನಗಳು, ಮಠಗಳ ಅಭಿವೃದ್ಧಿ, ವಿದ್ಯಾರ್ಥಿ ನಿಲಯಗಳ ಕಟ್ಟಡ ಕಾಮಗಾರಿಗೆ ಬೇಡಿಕೆಯನ್ವಯ ಬಿಡುಗಡೆಯಾದ ಹಣದ ಬಗ್ಗೆ ಹಾಗೂ ಕಳೆದ ನಾಲ್ಕು ವರ್ಷಗಳಿಂದ ಇದುವರೆಗೆ ಆಗಿರುವ ಕಾಮಗಾರಿಯ ಬಗ್ಗೆ ಕಾಮಗಾರಿಯನ್ನು ನಿರ್ಲಕ್ಷ್ಯ ಮಾಡಿರುವ ಹಾಗೂ ಕಾಮಗಾರಿಗೆ ಹಣ ಬಿಡುಗಡೆ ಮಾಡುವಂತೆ ಹಲವಾರು ಬಾರಿ ಅಲೆದರೂ ಸರ್ಕಾರ ಕ್ರಮ ಕೈಗೊಳ್ಳದಿರುವ ಬಗ್ಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:**

2012-13ನೇ ಸಾಲಿನಲ್ಲಿ ನೇಕಾರರ ಮಕ್ಕಳ ಮತ್ತು ಅವರ ಅನುಕೂಲಕ್ಕಾಗಿ ವಸತಿ ನಿಲಯ/ಸಮುದಾಯ ಭವನ ನಿರ್ಮಾಣದ ಕಲ್ಯಾಣ ಉದ್ದೇಶಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 155 ಬಿಎಂಎಸ್ 2011, ದಿನಾಂಕ: 15.09.2012ರಲ್ಲಿ ಒಟ್ಟು 403 ಕಾಮಗಾರಿಗಳಿಗೆ ರೂ.30.00 ಕೋಟಿ ಅನುದಾನವನ್ನು ಮಂಜೂರು ಮಾಡಿ, 2012-13ನೇ ಸಾಲಿನಲ್ಲಿ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ರಾಜ್ಯ ವಲಯ ಯೋಜನೆ ಲೆಕ್ಕ ಶಿರ್ಷಿಕೆ: 2225-03-001-0-05ರಡಿ ಒದಗಿಸಲಾಗಿದ್ದ ಒಟ್ಟಾರೆ ರೂ.80.00 ಕೋಟಿ ಅನುದಾನದಲ್ಲಿ ಮೊದಲನೇ ಕಂತಾಗಿ ರೂ.15.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರದ ಆದೇಶವನ್ನು ಹೊರಡಿಸಲಾಗಿರುತ್ತದೆ. (ಸರ್ಕಾರದ ಆದೇಶದ ಪ್ರತಿಯನ್ನು ಲಗತ್ತಿಸಿದೆ.

ಸದರಿ ಸರ್ಕಾರದ ಆದೇಶದನ್ವಯ ವಿವಿದ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಅನುದಾನವನ್ನು ನೇಕಾರ ಸಂಸ್ಥೆಗಳಿಗೆ ಬಿಡುಗಡೆ ಮಾಡಲು, ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದ ಮಾರ್ಗಸೂಚಿಗಳ ಸರ್ಕಾರದ ಆದೇಶ ಸಂಖ್ಯೆ: ಸಕಇ 178 ಬಿಎಂಎಸ್ 2012, ದಿನಾಂಕ: 06.06.2012ರ ಮಾರ್ಗಸೂಚಿಗಳಲ್ಲಿನ ಎಲ್ಲ ಷರತ್ತುಗಳನ್ನು ಕಟ್ಟುನಿಟ್ಟಾಗಿ ತಪ್ಪದೇ ಪಾಲಿಸತಕ್ಕದ್ದು. ಎಂದು ಷರತ್ತು ವಿಧಿಸಲಾಗಿರುತ್ತದೆ. ಅದ್ದರಿಂದ ಸರ್ಕಾರದ ಮಾರ್ಗಸೂಚಿಗಳನ್ವಯ ಸಂಬಂಧಪಟ್ಟ ಎಲ್ಲಾ ಸಂಘ-ಸಂಸ್ಥೆಗಳಿಂದ ದಾಖಲೆಗಳನ್ನು ಪಡೆದು ಪರಿಶೀಲಿಸಿ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ರಾಜ್ಯ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ದಿನಾಂಕ: 02.02.2013 ಮತ್ತು 23.10.2013 ರಲ್ಲಿ ಪತ್ರಗಳ ಮೂಲಕ ಕೋರಲಾಗಿದೆ.

2012-13ನೇ ಸಾಲಿನಲ್ಲಿ ಮೇಲ್ಕಂಡ ಸಂಸ್ಥೆಗಳಿಗೆ ಮಂಜೂರಾದ 15.00 ಕೋಟಿಗಳ ಅನುದಾನ ಆ ವರ್ಷದ ಒಟ್ಟಾರೆ ಅನುದಾನದಲ್ಲಿ ಬಳಕೆ ಮಾಡಲು ಸೂಚಿಸಿದ್ದರಿಂದ ದಾಖಲೆಗಳನ್ನು ಸಲ್ಲಿಸಿದ ಸಂಸ್ಥೆಗಳಿಗೆ ಆದ್ಯತೆಯನುಸಾರ ಅನುದಾನ ಬಿಡುಗಡೆ ಮಾಡಲಾಗಿದ್ದು, 2012-13ನೇ ಸಾಲಿನ ಮಾರ್ಚ್-31-2013ರ ಅಂತ್ಯಕ್ಕೆ ಸದರಿ ಸರ್ಕಾರದ ಆದೇಶದಲ್ಲಿನ 2 ಸಂಸ್ಥೆಗಳು ಮಾತ್ರ ದಾಖಲೆಗಳನ್ನು ಸಲ್ಲಿಸಿದ್ದು, ಸದರಿ 2 ಸಂಘಗಳಿಗೆ ರೂ.22.50 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗಿರುತ್ತದೆ.

ತದನಂತರ ಈ ಸಂಬಂಧ ರಾಜ್ಯದ ಎಲ್ಲಾ 30 ಜಿಲ್ಲೆಗಳ ನೇಕಾರ ಸಮುದಾಯ ಭವನಗಳಿಗೆ ಸಂಬಂಧಿಸಿದ ಕಡತಗಳನ್ನು ದಿನಾಂಕ: 19.06.2014 ರಿಂದ 24.06.2014ರ ವರಗೆ ವಿಭಾಗವಾರು ಅಯುಕ್ತರ ಕಛೇರಿಗೆ ತರಿಸಿಕೊಂಡು ಪರಿಶೀಲಿಸಲಾಗಿ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 155 ಬಿಎಂಎಸ್ 2011, ದಿನಾಂಕ:15.09.2012 ರಲ್ಲಿ ಆದೇಶಿಸಿರುವ ಹಲವು ಸಂಘ-ಸಂಸ್ಥೆಗಳು ನೋಂದಣಿಯಾಗಿರುವುದಿಲ್ಲ ಹಾಗೂ ಸಂಸ್ಥೆಗಳಿಗೆ ಸ್ವಂತ ನಿವೇಶನ ಹೊಂದಿಲ್ಲದೇ ಇರುವುದರಿಂದ ಈ ಕಾರ್ಯಕ್ರಮದಡಿ ಅನುದಾನ ಮಂಜೂರಾತಿಗೆ ಪರಿಗಣಿಸಲು ಬಾರದೇ ಇರುವ ಕಾರಣದಿಂದ ಜಿಲ್ಲಾಧಿಕಾರಿಗಳು, ಪ್ರಸ್ತಾವನೆಗಳು ಸಲ್ಲಿಸಿರುವುದಿಲ್ಲ ಎಂದು ಜಿಲ್ಲೆಗಳಿಂದ ತಿಳಿದು ಬಂದಿರುತ್ತದೆ.

ಆದರೆ ಕಳೆದ 4 ವರ್ಷಗಳಲ್ಲಿ ನೇಕಾರ ಸಮಾಜದ ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ಮಾಣಕ್ಕೆ 107 ಸಂಘ-ಸಂಸ್ಥೆಗಳಿಗೆ ರೂ.2026.10 ಲಕ್ಷಗಳ ಅನುದಾವನ್ನು ಮಂಜೂರು ಮಾಡಿ, ರೂ.1460.79 ಲಕ್ಷಗಳ ಅನುದಾನವನ್ನು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. (ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.)

ಮುಂದುವರೆದು ಕಳೆದ 4 ನಾಲ್ಕು ವರ್ಷಗಳಲ್ಲಿ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ಮಾಣಕ್ಕೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳ ಈ ಕೆಳಕಂಡಂತಿವೆ.

| ಕ್ರ.ಸಂ | ವರ್ಷ | ಬಿಡುಗಡೆ ಮಾಡಿರುವ ಅನುದಾನ (ರೂಲಕ್ಷಗಳಲ್ಲಿ) | ಸಂಘ-ಸಂಸ್ಥೆಗಳ ಸಂಖ್ಯೆ : |
|---|---|---|---|
| 1 | 2013-14 | 7428.83 | 228 |
| 2 | 2014-15 | 5598.70 | 663 |
| 3 | 2015-16 | 4978.95 | 375 |
| 4 | 2016-17 | 5720.98 | 479 |
| ಒಟ್ಟು | | **23727.46** | **1745** |

ಸರ್ಕಾರದಿಂದ ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಗೆ ಒಳಪಟ್ಟು ಅನುದಾನವನ್ನು ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ಮಾಣಕ್ಕೆ ಅನುದಾನವನ್ನು ಮಂಜೂರು ಮಾಡಿ, ಬಿಡುಗಡೆ ಮಾಡಲಾಗುತ್ತಿದೆ. ಅನುದಾನ ಮಂಜೂರು ಮಾಡಿರುವ ಯಾವುದೇ ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡಗಳ ಕಾಮಗಾರಿಗಳನ್ನು ನಿರ್ಲಕ್ಷ್ಯ ಮಾಡಿರುವುದಿಲ್ಲ.

ಆದರೆ 2016-17ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿರುವ ಪೂರ್ಣ ಅನುದಾನ ಸಮುದಾಯ ಭವನಗಳ ಕಟ್ಟಡ ನಿಮಾಣಕ್ಕೆ ಬಳಕೆ ಮಾಡಲಾಗಿದ್ದು, ಅನುದಾನ ಲಭ್ಯತೆ ಇಲ್ಲದೇ ಇರುವುದರಿಂದ ಪ್ರಗತಿಯಲ್ಲಿರುವ ಸಮುದಾಯ ಭವನ ಕಟ್ಟಡಗಳ ನಿರ್ಮಾಣಕ್ಕೆ 2 ಮತ್ತು 3ನೇ ಕಂತಿನ ಬಿಡುಗಡೆ ಮಾಡಲು 81 ಸಂಘ-ಸಂಸ್ಥೆಗಳಿಗೆ ರೂ.1164.11 ಲಕ್ಷ ಅನುದಾನ ಬಿಡುಗಡೆಗೆ ಬಾಕಿ ಉಳಿದಿರುತ್ತವೆ.(ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ).

2016–17ನೇ ಸಾಲಿನಲ್ಲಿ ಹೊಸದಾಗಿ ಅನುದಾನ ಮಂಜೂರು ಮಾಡಿ, ಬಿಡುಗಡೆ ಮಾಡಲು ಒಟ್ಟು 96 ಸಂಘ–ಸಂಸ್ಥೆಗಳಿಗೆ ರೂ.1795.00 ಲಕ್ಷಗಳ ಅನುದಾನ ಮಂಜೂರಾತಿ ಆದೇಶ ಹೊರಡಿಸಿದ್ದು, 2016–17ನೇ ಸಾಲಿನಲ್ಲಿ ಅನುದಾನ ಲಭ್ಯತೆ ಇಲ್ಲದೇ ಇರುವುದರಿಂದ ಅನುದಾನವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಬಾಕಿ ಉಳಿದಿರುತ್ತವೆ. (ವಿವರಗಳನ್ನು ಅನುಬಂಧ–3ರಲ್ಲಿ ಒದಗಿಸಲಾಗಿದೆ)

ಬಾಕಿ ಇರುವ ಸಂಘ–ಸಂಸ್ಥೆಗಳಿಗೆ 2017–18ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರದಿಂದ ಒದಗಿಸಲಾಗುವ ಅನುದಾನದಲ್ಲಿ ಅನುದಾನದ ಲಭ್ಯತೆಗೆ ಒಳಪಟ್ಟು ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು